

# ಕಳೆದ ದಿನಗಳ ನೆನಪುಗಳು

(ಸ್ವಾಮಿ ವಿರಜಾನಂದರ ಜೀವನ ಹಾಗೂ ಕೆಲವು ಸಮಕಾಲೀನ ಘಟನೆಗಳು)



ಮೂಲ ಬಂಗಾಳಿ: **ಸ್ವಾಮಿ ಶ್ರದ್ಧಾನಂದ** ಅನುವಾದ: **ಪ್ರವ್ರಾಜಿಕಾ ಯೋಗಾತ್ಮಪ್ರಾಣಾ**

## ಭಾಗ ೪೫

ಏಳು ವರ್ಷಗಳ ನಂತರ ಮುಂಬೈಗೆ ಬಂದಿದ್ದಾರೆ. ಇಷ್ಟು ದೀರ್ಘಕಾಲದ ನಂತರ ಅವರನ್ನು ಕಂಡ ಅಲ್ಲಿಯ ಭಕ್ತರ ಉತ್ಸಾಹ, ಆನಂದಗಳಿಗೆ ಪಾರವೇ ಇರಲಿಲ್ಲ. ಆದರೆ ಮಹಾರಾಜರ ಶರೀರದ ಅವಸ್ಥೆಯನ್ನು ಕಂಡು ಭಕ್ತರ ಅಂತರ್ಯವು ಒಂದು ಅವ್ಯಕ್ತ ವೇದನೆಯನ್ನು ಅನುಭವಿಸಿತು. ಹಿಂದಿನ ಬಾರಿ ಬಂದಾಗ ಮಹಾರಾಜರು ಭಕ್ತರೊಂದಿಗೆ ಅನೇಕ ಪ್ರಸಂಗಗಳನ್ನು ಹೇಳಿದ್ದರು. ಅನೇಕರ ವೈಯಕ್ತಿಕ ಸಮಸ್ಯೆಗಳನ್ನು ಪರಿಹರಿಸಿದ್ದರು. ಎಲ್ಲರೊಂದಿಗೆ ಅನೇಕ ಸಮಯವನ್ನು ಕಳೆದಿದ್ದರು. ಆದರೆ ಈ ಬಾರಿ ಅದಾವುದರ ಬಗ್ಗೆಯೂ ಒತ್ತಾಯಿಸುವಂತಿಲ್ಲ. ಕೆಲವು ಭಕ್ತರು ಹೀಗೆ ಭಾವಿಸುತ್ತಿದ್ದಾರೆ: 'ಇದಾವುದೂ ಆಗದಿದ್ದರೆ ತಾನೇ ಏನಂತೆ? ನೀವು ಹತ್ತಿರವಿದ್ದೀರಿ, ನಿಮ್ಮ ಸಾನ್ನಿಧ್ಯವಿದೆ. ದಿನಕ್ಕೊಮ್ಮೆ ನಿಮ್ಮ ದರ್ಶನ ಪಡೆಯುವ, ನಿಮಗೆ ಪ್ರಣಾಮ ಸಲ್ಲಿಸುವ ಪರಮ ಸೌಭಾಗ್ಯ ನಮ್ಮದಾಗಿದೆ! ನೀವು ಬಹಳಷ್ಟನ್ನು ನೀಡಿದ್ದೀರಿ, ನೀಡುತ್ತಲೂ ಇದ್ದೀರಿ. ನಾವು ಪಡೆದಷ್ಟನ್ನು ಸಾರ್ಥಕಗೊಳಿಸಿಕೊಳ್ಳುವಂತಾಗಲೆಂದು ಆಶೀರ್ವದಿಸಿ' ಎಂದು. ಅದೇನಾದರೂ ಆಗಲಿ, ಮಹಾರಾಜರು ತಮ್ಮ ಈ ದುರ್ಬಲ ಸ್ವಾಸ್ಥ್ಯದಲ್ಲಿಯೂ ಸಹ ೨೫೦ ಜನರಿಗೆ ದೀಕ್ಷೆಯನ್ನು ನೀಡಿದರು. ದೀಕ್ಷೆ ಪಡೆದವರಲ್ಲಿ ಮರಾಠಿಗಳು ಅಧಿಕಾಂಶದಲ್ಲಿದ್ದು, ಗುಜರಾತಿಗಳೂ, ಬಂಗಾಳಿಗಳೂ, ಪಾರ್ಸಿಗಳೂ ಸಹ ಇದ್ದರು.

ಮುಂಬೈನಲ್ಲಿ ಹದಿನೈದು ದಿನಗಳಿದ್ದು ಮಠಕ್ಕೆ ಹಿಂದಿರುಗುವಾಗ ನಾಗಪುರದಲ್ಲಿ ಐದು ದಿನಗಳಿಗಾಗಿ ಇಳಿದರು. ಏಳು ವರ್ಷಗಳ ಹಿಂದೆ ಕೆಲವು ಮರಾಠೀ ಕಾಲೇಜು ಯುವಕರು ಮಹಾರಾಜರಿಂದ ಸಾಧನೋಪದೇಶವನ್ನು ಪಡೆದಿದ್ದರು. ಈ ಸಲ ನೋಡಿದಾಗ ಅವರಲ್ಲಿ ಅನೇಕರು ಮಠಕ್ಕೆ ಸೇರಿಬಿಟ್ಟಿದ್ದಾರೆ. ಹೃದಯದುಂಬಿ ಅವರನ್ನೆಲ್ಲ ಆಶೀರ್ವದಿಸಿದರು. ಒಂದು ದಿನ ಸಂಧ್ಯಾರತಿಯ ನಂತರ ಆಶ್ರಮವಾಸಿಗಳಲ್ಲೊಬ್ಬರು ಪಿಟೀಲಿನೊಡನೆ ವಿರಜಾನಂದರಿಂದ ರಚಿತವಾದ 'ಶ್ರೀರಾಮಕೃಷ್ಣ ಸ್ತೋತ್ರದಶಕಮ್' ಅನ್ನು ಹಾಡಿದರು. ಅದನ್ನು ಕೇಳಿ ಮಹಾರಾಜರು ಸುಪ್ರೀತರಾದರು. ಭಕ್ತೆಯೊಬ್ಬಳು ತನ್ನ ಮಗನಿಗೆ ಮಹಾರಾಜರು ತಮ್ಮ ಕೈಯಿಂದ ಬಳಪವನ್ನು ಹಿಡಿಸಲಿ ಎಂದು ತುಂಬ ಆಸೆಪಟ್ಟಿದ್ದಳು. ಇದಕ್ಕೂ ಮಹಾರಾಜರು ನಕ್ಕು ಸಮ್ಮತಿಸಿದರು. ಬಾಲಕನನ್ನು ದೇವರಮನೆಯಲ್ಲಿ ಕೂಡಿಸಿಕೊಂಡು, ಕೈಹಿಡಿದು 'ಶ್ರೀರಾಮಕೃಷ್ಣ' ಎಂದು ಬರೆಸಿದರು; ಪ್ರೀತಿಪೂರ್ವಕವಾಗಿ ಆಶೀರ್ವದಿಸಿ 'ಮನಸ್ಸಿಟ್ಟು ಓದು, ಬರಹ ಮಾಡು' ಎಂದರು.

ನಾಗಪುರ ನಿವಾಸಿಯಾದ ಪಂಜಾಬೀ ಅಧ್ಯಾಪಕರೊಬ್ಬರು ಕೆಲವು ವರ್ಷಗಳ ಹಿಂದೆ ವಿರಜಾನಂದರಿಂದ ದೀಕ್ಷೆ ಪಡೆದಿದ್ದರು. ಅವರು ಅತ್ಯಂತ ನಿಷ್ಠೆಯಿಂದ ದಿನವೂ ಪೂಜಾದಿಗಳನ್ನು ಮಾಡಿಕೊಂಡು ಬರುತ್ತಿದ್ದರು. ಆದರೆ ಅವರ ಸಹಧರ್ಮಿಣಿಗೆ ಇವೆಲ್ಲ ಕಿಂಚಿತ್ತೂ ಇಷ್ಟವಾಗುತ್ತಿರಲಿಲ್ಲ. ಆಕೆಯು ಆರ್ಯಸಮಾಜದ ಅನುಯಾಯಿಯಾದ್ದರಿಂದ ಸಾಕಾರ ಪೂಜೆಯ ಘೋರ ವಿರೋಧಿಯಾಗಿದ್ದಳು. ಆಧ್ಯಾತ್ಮಿಕ ಸಾಧನೆಯ ವಿಷಯದಲ್ಲಿ ಪತಿ-ಪತ್ನಿಯರ ನಡುವೆ ಮನಸ್ತಾಪವೂ ಅಶಾಂತಿಯೂ ದಿನದಿನಕ್ಕೂ ಹೆಚ್ಚಾಗತೊಡಗಿತ್ತು. ತಮ್ಮ ಪತ್ನಿಯು ಮಹಾರಾಜರನ್ನೊಮ್ಮೆ ಭೇಟಿಯಾದರೆ, ಆಕೆಯ ವಿರೋಧಿ ಮನೋಭಾವವು ಮಾಯವಾಗುವುದೆಂದು ಆತನ ವಿಶ್ವಾಸ. ಆಕೆಯಾದರೋ ಆಶ್ರಮಕ್ಕೆ ಬರಲೊಲ್ಲಳು! ಒಂದು ದಿನ ಈ ಅಧ್ಯಾಪಕರು ಸಂದರ್ಭ ನೋಡಿ ಮಹಾರಾಜರಲ್ಲಿ ತಮ್ಮ ಹೃದಯದ ವೇದನೆಯನ್ನು ತೋಡಿಕೊಂಡು ಕಣ್ಣೀರಿಟ್ಟರು. ಮಹಾರಾಜರು ಅಧ್ಯಾಪಕರಿಗೆ ಸ್ನೇಹಪೂರ್ವಕವಾಗಿ, ''ನಡೆ, ನಾನೇ ನಿಮ್ಮ ಮನೆಗೆ ಬಂದು ನಿನ್ನ ಪತ್ನಿಯನ್ನು ಭೇಟಿಮಾಡುವೆ'' ಎಂದರು. ಆಶ್ರಮದ ಮುಖ್ಯಸ್ಥರಾದ ಸ್ವಾಮಿ ಭಾಸ್ಕರೇಶ್ವರಾನಂದರೊಂದಿಗೆ ಒಂದು ಸಂಜೆ ಮಹಾರಾಜರು ಅಧ್ಯಾಪಕರ ಮನೆಗೆ ಹೋದರು. ಏನಾಶ್ಚರ್ಯ! ಮಹಿಳೆಯೇ ಮೊದಲು ಮಹಾರಾಜರನ್ನು ಎದುರುಗೊಂಡು, ತನ್ನ ಪತಿಯ ಅಧ್ಯಾತ್ಮ ಮಾರ್ಗದರ್ಶಕರನ್ನು ಎವೆಯಿಕ್ಕದೆ ನೋಡುತ್ತಿದ್ದಾಳೆ. ಸ್ವಲ್ಪ ಹೊತ್ತಿನ ನಂತರ ಮಂತ್ರಮುಗ್ಧಳಂತೆ ಅವರ ಪದತಲದಲ್ಲಿ ಬಿದ್ದು ಹೊರಳಾಡುತ್ತಿದ್ದಾಳೆ. ''ಸ್ವಾಮೀಜಿ ನೀವು ನನ್ನ ಮೇಲೆ ಕೃಪೆದೋರಿ, ನಿಮ್ಮ ಶ್ರೀಚರಣದಲ್ಲಿ ನನಗೂ ಆಶ್ರಯ ನೀಡಿ'' ಎನ್ನುತ್ತಿದ್ದಾಳೆ. ಮಹಾರಾಜರು ಆಕೆಯನ್ನು ಸ್ನೇಹಪೂರ್ವಕವಾಗಿ ಆಶೀರ್ವದಿಸಿದರು. ಆಕೆಯ ಮಗಳೊಬ್ಬಳು ವಿಕಲಾಂಗಳಾಗಿದ್ದು, ನಡೆಯಲಾಗುತ್ತಿರಲಿಲ್ಲ. ಮಹಾರಾಜರು ಆ ಬಾಲಕಿಯಿದ್ದೆಡೆಗೆ ಹೋಗಿ ಅವಳನ್ನು ಆಶೀರ್ವದಿಸಿ ಬಂದರು. ಇದಾದ ನಂತರ ಆ ಅಧ್ಯಾಪಕರ ಮನೆಯಲ್ಲಿ ಶಾಂತಿ-ಸಾಮರಸ್ಯಗಳು ನೆಲೆಸಿದವು.

ರಾಯಪುರದಲ್ಲಿ ಒಂದು ಬೃಹತ್ ಭಕ್ತಗೋಷ್ಠಿಯು ರೂಪುಗೊಂಡಿತ್ತು. ಮಹಾರಾಜರು ನಾಗಪುರದಿಂದ ಕೊಲ್ಕತ್ತೆಗೆ ಹಿಂದಿರುಗುವಾಗ ರಾಯಪುರದ ನಿಲ್ದಾಣದಲ್ಲಿ ಈ ಭಕ್ತಗೋಷ್ಠಿಯು ಅಪಾರ ಉತ್ಸಾಹದಿಂದ ಮಹಾರಾಜರ ದರ್ಶನ ಪಡೆದು, ಅವರನ್ನು ಅಭಿನಂದಿಸಿದರು. ಇದೇ ರೀತಿ ಖಡ್ಗಪುರದ ಭಕ್ತರೂ, ಮೇದಿನೀಪುರದ ಭಕ್ತರೂ ನಿಲ್ದಾಣಗಳಲ್ಲಿ ಈ ಸದವಕಾಶವನ್ನು ಉಪಯೋಗಿಸಿಕೊಂಡರು.

೧೯೪೭ರ ಫೆಬ್ರವರಿ ೧೭ರಂದು ಮಹಾರಾಜರು ಬೇಲೂರು ಮಠಕ್ಕೆ ಹಿಂತಿರುಗಿದರು. ಎರಡು ದಿನಗಳ ನಂತರವೇ ಶಿವರಾತ್ರಿ. ಪ್ರತಿಸಲದಂತೆ ಮಠದ ಅಂಗಳದಲ್ಲಿ ದೊಡ್ಡ ಧುನಿಯನ್ನು ಹಚ್ಚಿ ಸಂನ್ಯಾಸಿಗಳು ಶಿವನಾಮವನ್ನೂ ಭಜನೆಯನ್ನೂ ಮಾಡಿದರು. ವಿರಜಾನಂದರು ಮೇಲಿನ ತಮ್ಮ ಕೊಠಡಿಯಲ್ಲೇ ಕುಳಿತು ಎಲ್ಲವನ್ನೂ ಆಲಿಸಿದರು. ಫೆಬ್ರವರಿ ೨೩ರಂದು ಶ್ರೀರಾಮಕೃಷ್ಣರ ಶುಭ ಜನ್ಮತಿಥಿ. ಅಂದು ಮಹಾರಾಜರು ಮಂದಿರಕ್ಕೆ ಹೋಗಿ ಶ್ರೀರಾಮಕೃಷ್ಣರ ಪ್ರತಿಮೆಯ ಪಾದಕ್ಕೆ ಪುಷ್ಪಾಂಜಲಿಯನ್ನು ಅರ್ಪಿಸಿದರು. ಇತರ ಮಂದಿರಗಳಿಗೂ ಹೋಗಿ ದರ್ಶನ ಮಾಡಿ ಬಂದರು. ತಳ್ಳುವ ಗಾಲಿಕುರ್ಚಿಯೊಂದರಲ್ಲಿ ಮಹಾರಾಜರನ್ನು ಕೂಡಿಸಿಕೊಂಡು ಈ ಎಲ್ಲ ಜಾಗಗಳಿಗೂ ಕರೆದೊಯ್ಯಲಾಯಿತು. ಫ್ರಾನ್ಸ್ ಕೇಂದ್ರದ ಸ್ವಾಮಿ ಸಿದ್ಧೇಶ್ವರಾನಂದರು[1] ಹತ್ತು ವರ್ಷಗಳ ನಂತರ ಕೆಲವು ದಿನಗಳ ಮಟ್ಟಿಗೆ ಭಾರತಕ್ಕೆ ಬಂದಿದ್ದರು. ಆ ದಿನ ಸಂಜೆ ಮಂದಿರದ ಪೂರ್ವಕ್ಕಿರುವ ಬಯಲಿನಲ್ಲಿ ನೆರೆದಿದ್ದ ಬೃಹತ್ ಸಭೆಯಲ್ಲಿ ಸಿದ್ಧೇಶ್ವರಾನಂದರು ಉಪನ್ಯಾಸ ನೀಡಿದರು. ಶುಭಜನ್ಮತಿಥಿಯ ರಾತ್ರಿಯ ಅಂತ್ಯದಲ್ಲಿ ೧೪ ವ್ರತಿಗಳು ಸಂನ್ಯಾಸ ದೀಕ್ಷೆಯನ್ನೂ, ೧೮ ವ್ರತಿಗಳು ಬ್ರಹ್ಮಚರ್ಯ ದೀಕ್ಷೆಯನ್ನೂ ಮಠಾಧ್ಯಕ್ಷರಿಂದ ಪಡೆದರು. ಕೆಲದಿನಗಳ ನಂತರ ಮಹಾರಾಜರು ಅವರೆಲ್ಲರಿಗೂ ಸಾಧು ಜೀವನ, ಆದರ್ಶದ ಬಗ್ಗೆ ಒಂದು ಗಂಟೆಯ ಕಾಲ ಉಪದೇಶ ನೀಡಿದರು.

ಆರು ದಿನಗಳ ನಂತರ ಮಾರ್ಚ್ ೩, ೧೯೪೭ರಂದು ಶ್ರೀರಾಮಕೃಷ್ಣರ ಸಾರ್ವಜನಿಕ ಉತ್ಸವ. ಅಂದು ಉತ್ಸವ ಕ್ಷೇತ್ರದಲ್ಲಿ ಸುತ್ತಾಡಿ ಎಲ್ಲವನ್ನೂ ನೋಡಿಬರಬೇಕೆಂದು ಮಹಾರಾಜರ ಇಚ್ಛೆ. ಹನ್ನೊಂದು ಗಂಟೆಯ ಹೊತ್ತಿಗೆ ಸೇವಕರು ಅವರನ್ನು ಗಾಲಿಕುರ್ಚಿಯಲ್ಲಿ ಕೂರಿಸಿಕೊಂಡು ನಡೆದರು. ಮೊದಲು ಹೋದದ್ದು ಠಾಕೂರ್ ಮಂದಿರಕ್ಕೆ. ನಂತರ ಹೋದದ್ದು ಶ್ರೀರಾಮಕೃಷ್ಣರ ತೈಲಚಿತ್ರವನ್ನಿಟ್ಟ ಪುಷ್ಪ-ಪತ್ರಗಳಿಂದ ಸುಂದರವಾಗಿ ಅಲಂಕರಿಸಿದ್ದ ಕುಟೀರಕ್ಕೆ. ಆ ಕುಟೀರವನ್ನು ತಾತ್ಕಾಲಿಕವಾಗಿ ಬೃಹತ್ ಪೆಂಡಾಲಿನ ಮುಂದೆ ನಿರ್ಮಿಸಲಾಗಿತ್ತು. ಮಹಾರಾಜರು ನಂತರ ಬೇರೆಲ್ಲ ಮಂದಿರದಲ್ಲಿ ದರ್ಶನ ಪಡೆದರು. ನಂತರ ಅಂಗಡಿ ಬೀಡನ್ನು ತಿರುಗಿ ಮಂದಿರದ ಪಶ್ಚಿಮ ಪಾರ್ಶ್ವದಲ್ಲಿದ್ದ ತಗಡಿನ ಛಾವಣಿಯುಳ್ಳ, ಪ್ರಸಾದ ವಿತರಣೆಗಾಗಿ ಖಿಚುಡಿ ತಯಾರಾಗುತ್ತಿದ್ದ ಸ್ಥಳವನ್ನು ನೋಡಿದರು. ವಿದ್ಯಾಮಂದಿರದಲ್ಲಿ ಬಹು ಚೆನ್ನಾಗಿ ಆಯೋಜಿಸಲಾಗಿದ್ದ 'ಸರ್ವಧರ್ಮ ಸಮನ್ವಯ' ಪ್ರದರ್ಶನವನ್ನೂ ಸಹ ನೋಡಿದರು. ಮಹಾರಾಜರು ಹೋಗಿ ಬರುವ ದಾರಿಯ ಇಕ್ಕೆಲಗಳಲ್ಲಿ ಶ್ರದ್ಧಾವಂತ ಭಕ್ತರು ಕೈ ಮುಗಿದುಕೊಂಡು ನಿಂತಿದ್ದರು. ಮಹಾರಾಜರೂ ಸಹ ಮಂದಸ್ಮಿತರಾಗಿ ಎಲ್ಲರಿಗೂ ತಮ್ಮ ಆಶೀರ್ವಾದಗಳನ್ನು ನೀಡಿದರು.

ಕೋಮುವಾದದ ಅಗ್ನಿಯು ಆರುತ್ತಿಲ್ಲ. ಬೇಲೂರಿನ ಕಡೆಯಲ್ಲೂ ಅದರ ಕಬಂಧಬಾಹುವು ವಿಸ್ತರಿಸುತ್ತಿದೆ. ದೇಶವಿಡೀ ವ್ಯಾಪಕ ವಿಪತ್ತು ಹರಡಿದೆ. ರಾಜಕೀಯ ರಂಗದಲ್ಲಿ ತೀವ್ರವಾದ ಪರಿವರ್ತನೆಗಳು ನಡೆಯುತ್ತಲಿವೆ. ದೇಶವೇ ವಿಭಾಗವಾಗುವ ಸಮಯ ಹತ್ತಿರವಾಗುತ್ತಲಿದೆ. ರಾಷ್ಟ್ರವು ಸ್ವತಂತ್ರವಾಗುತ್ತಿದೆಯಾದರೂ ಬಂಗಾಳಿಗಳ ಮನಸ್ಸಿಗೆ ಆನಂದವಿಲ್ಲ. ಸ್ವಾತಂತ್ರ್ಯಕ್ಕಾಗಿ ತೆತ್ತ ಬೆಲೆಯಾದರೂ ಏನು? ಸಮಾಜಘಾತುಕ ಶಕ್ತಿಗಳಿಂದಾಗಿ ಮಠಕ್ಕೆ ಬರುತ್ತಿದ್ದ ಭಕ್ತರ ಸಂಖ್ಯೆಯು ಸಹ ಕಡಿಮೆಯೆ. ಸಾಧುಗಳು ಸರದಿ ಪ್ರಕಾರ ರಾತ್ರಿಯಲ್ಲಿ ಮಠದ ಪಹರೆ ಕಾಯುತ್ತಿದ್ದರು.

ಮಾರ್ಚ್ ೮ರಂದು ಕೊಲ್ಕತ್ತೆಯ ಯೂನಿವರ್ಸಿಟಿ ಇನ್ಸ್ಟಿಟ್ಯೂಟ್ ಹಾಲ್‌ನಲ್ಲಿ ನಾಗರಿಕರು ಸಿದ್ಧೇಶ್ವರಾನಂದರಿಗೊಂದು ಅಭಿನಂದನಾ ಸಮಾರಂಭವನ್ನು ಆಯೋಜಿಸಿದ್ದರು. ಅಭಿನಂದನೆಗೆ ಉತ್ತರವಾಗಿ ಅವರು ಫ್ರಾನ್ಸಿನಲ್ಲಿ ವೇದಾಂತದ ಪ್ರಭಾವದ ಬಗ್ಗೆ ಒಂದು ಗಂಟೆಯ ಕಾಲ ತುಂಬ ಮನೋಜ್ಞವಾಗಿ ಮಾತನಾಡಿದರು. ಹಾಲ್ ಭರ್ತಿಯಾಗಿ ಹೋಗಿತ್ತು. ಸಭೆಯ ವಿವರಣೆಯನ್ನು ಕೇಳಿ ವಿರಜಾನಂದರು ತುಂಬ ಸಂತೋಷಗೊಂಡರು. ಇದಾದ ಕೆಲವು ದಿನಗಳ ನಂತರ ಮಾರ್ಚ್ ೧೨ರಂದು ಸ್ವಾಮಿ ಸಿದ್ಧೇಶ್ವರಾನಂದರು ಮಠದಿಂದ ಹೊರಟು ಫ್ರಾನ್ಸಿಗೆ ಹೋಗುವ ಮಾರ್ಗವಾಗಿ ಕರಾಚಿಗೆ ಹೋದರು. ವಿದಾಯ ತೆಗೆದುಕೊಳ್ಳುವಾಗ ಅವರು ಸ್ವಾಮಿ ವಿರಜಾನಂದರಿಗೆ ಒಂದು ಚಿಕ್ಕ ಪದಕವನ್ನು ಉಡುಗೊರೆಯನ್ನಾಗಿ ನೀಡಿದರು. ಅದರಲ್ಲಿ ಅಸಿಸಿಯ ಸಂತ ಫ್ರಾನ್ಸಿಸ್‌ರವರ ವಸ್ತ್ರವೊಂದರ ಒಂದು ಎಳೆದಾರವಿತ್ತು. ಈ ಪದಕವನ್ನು ಸಿದ್ಧೇಶ್ವರಾನಂದರು ಪೋಪ್‌ಗಳಿಂದ ಪಡೆದಿದ್ದರು. ವಿರಜಾನಂದರು ಫ್ರಾನ್ಸಿನ ಭಕ್ತ ಸಮೂಹಕ್ಕೆ ತಮ್ಮ ಶುಭಾಶಯ ವಾಣಿಯನ್ನು ಸ್ವಾಮಿ ಸಿದ್ಧೇಶ್ವರಾನಂದರ ಮೂಲಕ ಕಳುಹಿಸಿಕೊಟ್ಟರು.

---

[1] ಸ್ವಾಮಿ ಸಿದ್ಧೇಶ್ವರಾನಂದರು ೧೯೩೭ರಲ್ಲಿ ವೇದಾಂತ ಪ್ರಚಾರಕ್ಕೆಂದು ಫ್ರಾನ್ಸಿಗೆ ಹೋದರು. ಎರಡನೇ ಮಹಾಯುದ್ಧದ ಸಮಯದಲ್ಲಿ ನಾನಾ ಪ್ರತಿಕೂಲ ಪರಿಸ್ಥಿತಿಯ ಮಧ್ಯದಲ್ಲೂ ಧೃತಿಗೆಡದೆ ಅಲ್ಲಿಯೇ ಉಳಿದುಕೊಂಡರು. ನಿಧಾನವಾಗಿ ಅವರ ಕೆಲಸವು ಬೇರೂರತೊಡಗಿತು. ೧೯೪೮ರಲ್ಲಿ ಪ್ಯಾರಿಸ್ಸಿನಿಂದ ೨೦ ಮೈಲಿ ದೂರದಲ್ಲಿರುವ ಗ್ರೆಟ್ಸ್ ಎಂಬಲ್ಲಿ ಭಕ್ತರೊಬ್ಬರ ಉದಾರತೆಯಿಂದ ವೇದಾಂತ ಕೇಂದ್ರದ ಶಾಶ್ವತ ನೆಲೆಯು ಸ್ಥಾಪಿಸಲ್ಪಟ್ಟಿತು.

ಸಂಘದ ಉಪಾಧ್ಯಕ್ಷರಾದ ಸ್ವಾಮಿ ಅಚಲಾನಂದರು (ಕೇದಾರ್ ಬಾಬಾ) ಮಾರ್ಚ್ ೧೧ರಂದು (೧೯೪೭) ಕಾಶೀ ಸೇವಾಶ್ರಮದಲ್ಲಿ ತಮ್ಮ ದೇಹತ್ಯಾಗ ಮಾಡಿದರು. ಅವರಿಗೆ ೭೧ ವರ್ಷ ವಯಸ್ಸಾಗಿತ್ತು. ಕೆಲವು ಕಾಲದಿಂದ ಅವರ ಅಸ್ವಸ್ಥತೆಯ ಬಗ್ಗೆ ಆತಂಕಜನಕವಾದ ಸಮಾಚಾರಗಳು ಬರುತ್ತಲೇ ಇದ್ದವು. ಸ್ವಾಮಿ ಶಂಕರಾನಂದರನ್ನು ಕೊನೆಯ ಬಾರಿಗೆ ನೋಡಬೇಕೆಂಬ ತಮ್ಮ ಇಚ್ಛೆಯನ್ನು ಅವರು ವ್ಯಕ್ತಪಡಿಸಿದ್ದರು. ಇದನ್ನು ತಿಳಿದ ಶಂಕರಾನಂದರು ೧೧ನೇ ತಾರೀಖಿನಂದು ಕಾಶಿಗೆ ಹೊರಟರು. ಆದರೆ ಅವರು ತಲುಪುವ ಮುನ್ನವೇ ಕೇದಾರ್ ಬಾಬಾ ಮಹಾ ಸಮಾಧಿಯನ್ನೈದಿದ್ದರು. ಅಚಲಾನಂದರು ಸ್ವಾಮಿ ವಿವೇಕಾ ನಂದರಿಂದ ಮಂತ್ರದೀಕ್ಷೆಯನ್ನು ಪಡೆದಿದ್ದರು. ೧೯೦೨ರ ವೈಶಾಖೀ ಪೂರ್ಣಿಮೆಯಂದು ಸ್ವಾಮೀಜಿಯವರಿಂದಲೇ ಸಂನ್ಯಾಸ ವನ್ನು ಪಡೆದಿದ್ದರು. ಅವರದ್ದು ತಪೋಮಯ ಜೀವನ. ಕಾಶೀ ಸೇವಾಶ್ರಮವು ಏಕನಿಷ್ಠ ನಿಷ್ಕಾಮಕರ್ಮಿಠರ ಸಾಧನೆಯ ಫಲ ವಾಗಿ ರೂಪುಗೊಂಡಿದ್ದು, ಅಚಲಾನಂದರೂ ಇಂತಹವರಲ್ಲಿ ಒಬ್ಬರಾಗಿದ್ದರು. ಜೀವನದ ಕೊನೆಯವರೆಗೂ ಸೇವಾಶ್ರಮದ ಉನ್ನತಿಗೋಸ್ಕರ ಅವರಿಗಿದ್ದ ಆಗ್ರಹ ಅಪಾರ. ಇವರ ಭಕ್ತಿ ವಿಶ್ವಾಸೋಜ್ಜ್ವಲ ಸ್ನಿಗ್ಧ-ಸೌಮ್ಯ ವ್ಯಕ್ತಿತ್ವ ಮತ್ತು ಪ್ರೇಮಪೂರಿತ ಪುಣ್ಯ ಸಂಗವು ಸಾಧು ಬ್ರಹ್ಮಚಾರಿ ಭಕ್ತರಿಗೆ ಸರ್ವದಾ ಸ್ಫೂರ್ತಿ ನೀಡುತ್ತಿತ್ತು. ಇವರು ವಿರಜಾನಂದರನ್ನು ಅಣ್ಣನಂತೆ ಗೌರವಿಸುತ್ತಿದ್ದು, ಪತ್ರ ವ್ಯವಹಾರವನ್ನು ಇಟ್ಟುಕೊಂಡಿದ್ದರು. ವಿರಜಾನಂದರು ತಮ್ಮ ದಿನಚರಿಯಲ್ಲಿ ಮಾರ್ಚ್ ೧೧ರಂದು ಬರೆದದ್ದು ಹೀಗಿದೆ :

''ಕೇದಾರ್ ಬಾಬಾ ಬೆಳಗ್ಗೆ ೯.೩೦ಕ್ಕೆ ತಮ್ಮ ಶರೀರವನ್ನು ಬಿಟ್ಟರೆಂಬ ಸಮಾಚಾರವನ್ನು ಇಂದು ಮಧ್ಯಾಹ್ನದ ಟೆಲಿಗ್ರಾಂನಿಂದ ತಿಳಿದೆ. ಬೆಳಗ್ಗೆ ಆ ಸಮಯಕ್ಕೆ ಸರಿಯಾಗಿ ನನ್ನ ಎದೆಯಲ್ಲಿ ಒಂದು ನೋವನ್ನನುಭವಿಸಿದೆ. ಆಗಲೇ ತಿಳಿದುಕೊಂಡೆ, ನನ್ನ ಪ್ರಿಯ ಸಹೋದರ ನಮ್ಮನ್ನು ಬಿಟ್ಟು ಹೊರಟುಹೋದ ಎಂದು.''

ಮಾರ್ಚ್ ೧೫ರಂದು ಮಠದ ಪ್ರಾಂಗಣದಲ್ಲಿ 'ಹೌರಾ ಸಮಾಜ'ದವರು ಮಹಾಕವಿ ಗಿರೀಶಚಂದ್ರರು ರಚಿಸಿದ್ದ 'ನಸೀ ರಾಮ್' ಎಂಬ ಬಯಲುನಾಟಕವನ್ನು ಅಭಿನಯಿಸಿದರು. ರಾತ್ರಿ ೮ರಿಂದ ಪ್ರಾರಂಭವಾಗಿ ೧೨ ಗಂಟೆಯವರೆಗೂ ಮುಂದು ವರಿಯಿತು. ವಿರಜಾನಂದರು ಪ್ರಾಂಗಣದ ಒಂದು ಪಾರ್ಶ್ವದಲ್ಲಿ, ಆರಾಮಕುರ್ಚಿಯಲ್ಲಿ ಕುಳಿತು ಈ ಭಕ್ತಿಪ್ರಧಾನವಾದ ನಾಟಕವನ್ನು ವೀಕ್ಷಿಸಿದರು. ಕಾಮಾರಪುಕುರದಲ್ಲಿ ಶ್ರೀರಾಮ ಕೃಷ್ಣರ ಜನ್ಮಸ್ಥಳದಲ್ಲಿ ಮಂದಿರವನ್ನು ಕಟ್ಟಿಸಲು ಮತ್ತು ಆಶ್ರಮವೊಂದನ್ನು ಸ್ಥಾಪಿಸಲು, ಅಲ್ಲಿಯ ರಾಮಕೃಷ್ಣರ ವಾಸಗೃಹವು ಸಂಘದ ಕೈಸೇರಿತು. ಈ ಸಂದರ್ಭದಲ್ಲಿ ಏಪ್ರಿಲ್ ೧೧ರಂದು ಒಂದು ಆನಂದೋತ್ಸವವನ್ನು ಏರ್ಪಡಿಸಲಾಗಿತ್ತು. ಸಾಧು-ಬ್ರಹ್ಮಚಾರಿಗಳ ದೊಡ್ಡ ಗುಂಪು ಮಹಾರಾಜರ ಆಶೀರ್ವಾದವನ್ನು ಪಡೆದು ಆ ಪುಣ್ಯಕ್ಷೇತ್ರಕ್ಕೆ ಹೊರಟಿತ್ತು. ಇದಕ್ಕೂ ಕೆಲದಿನ ಮೊದಲು ಮಾರ್ಚ್ ೩೧ರಂದು ನಡೆದ ಮಠದ ಟ್ರಸ್ಟಿಗಳ ಮಹತ್ವಪೂರ್ಣ ಸಭೆಯಲ್ಲಿ ಶಂಕರಾನಂದರನ್ನು ಮತ್ತು ವಿಶುದ್ಧಾನಂದರನ್ನು ಮಠ ಮತ್ತು ಮಿಷನ್ನಿನ ಯುಗಳ ಉಪಾಧ್ಯಕ್ಷರನ್ನಾಗಿ ನೇಮಿಸಲಾಗಿತ್ತು. ಅಲ್ಲದೆ ಇನ್ನೂ ಆರು ಹೊಸ ಟ್ರಸ್ಟಿಗಳನ್ನು ನೇಮಿಸಲಾಗಿತ್ತು.

ಈ ಬಾರಿಯೂ ವಿರಜಾನಂದರು ಬೇಸಿಗೆಯನ್ನು ವಿಶಾಖ ಪಟ್ಟಣದ ಆಶ್ರಮದಲ್ಲೇ ಕಳೆಯುವುದೆಂದು ನಿರ್ಧಾರವಾಯಿತು; ಏಪ್ರಿಲ್ ೨೦ರಂದು ಅಲ್ಲಿಗೆ ಹೊರಟರು. ಅಲ್ಲಿಯ ಆಶ್ರಮದ ನಿಃಶ್ರೇಯಸಾನಂದರು, ಹಿಂದಿನ ಬಾರಿ ಮಹಾರಾಜರು ಉಳಿದುಕೊಂಡಿದ್ದಾಗ ಅವರಿಗೆ ಏನೇನು ಸಣ್ಣಪುಟ್ಟ ಅನನುಕೂಲಗಳಾಗಿ ದ್ದವೋ ಅವೆಲ್ಲವನ್ನೂ ಈ ಬಾರಿ ನಿವಾರಿಸಿದ್ದರು.

ಪ್ರಸಿದ್ಧವಾದ 'ಸಿಂಹಾಚಲ'ವೆಂಬ ತೀರ್ಥಕ್ಷೇತ್ರವು ವಿಶಾಖ ಪಟ್ಟಣದ ಆಶ್ರಮದಿಂದ ೧೦ ಮೈಲಿ ದೂರದಲ್ಲಿತ್ತು. ಇಲ್ಲಿಯ ಬೆಟ್ಟದ ಮೇಲೆ ನೃಸಿಂಹ ದೇವರ ಮಂದಿರವಿದೆ. ಒಂದು ದಿನ ಅಲ್ಲಿಯ ದೇವರ ದರ್ಶನ ಮಾಡಿಬರಬೇಕೆಂದು ಮಹಾರಾಜರು ನಿರ್ಧರಿಸಿದರು. ಮಹಾರಾಜರ ವೈದ್ಯರಾದ ಡಾ. ಪೆರುರಾಜು ರವರೇ ಸ್ವತಃ ವಿರಜಾನಂದರನ್ನು ಮೋಟಾರಿನಲ್ಲಿ ಸಿಂಹಾಚಲಕ್ಕೆ ಕರೆದೊಯ್ದರು. ಅಲ್ಲಿಗೆ ಹೊರಡುವ ದಿನದಂದು (ಜುಲೈ ೧೬, ೧೯೪೭) ಬೆಳಗಿನಿಂದಲೇ ಆಕಾಶದಲ್ಲಿ ಮೋಡ ಕವಿದಿತ್ತು. ಸ್ವಲ್ಪ ಸ್ವಲ್ಪವಾಗಿ ಮಳೆಯೂ ಬೀಳುತ್ತಿತ್ತು. ಆದರೆ ಮಹಾರಾಜರು ತಮ್ಮ ಮನಸ್ಸನ್ನು ಬದಲಿಸಲಿಲ್ಲ. ಮಹಾರಾಜರ ತಂಡದಲ್ಲಿ ಅವರನ್ನೂ ಕೂಡಿ ಹತ್ತು ಜನರಿದ್ದರು. ಮೂರು ಮೋಟಾರು ಗಾಡಿಗಳಲ್ಲಿ ಕುಳಿತು ಬೆಳಗ್ಗೆ ೧೧ ಗಂಟೆಯ ಹೊತ್ತಿಗೆ ಬೆಟ್ಟದ ತಪ್ಪಲನ್ನು ಸೇರಿದರು. ವಿಜಯನಗರ ಮಹಾರಾಜರ ದಿವಾನ ರಾದ ಮಿ. ರಾವ್ ಎಂಬುವರು ದೇವರ ದರ್ಶನಕ್ಕೆ ಎಲ್ಲ ಏರ್ಪಾಟನ್ನೂ ಮಾಡಿದ್ದರು. ದೇವಾಲಯಕ್ಕೆ ಸಾವಿರ ಮೆಟ್ಟಿಲುಗಳನ್ನು ಹತ್ತಿ ಹೋಗಬೇಕಾಗಿತ್ತು. ಆದ್ದರಿಂದ ಹತ್ತು ಮಂದಿ ವಾಹಕರು ದಂಡಿಯಂತಹ ಒಂದು ಕುರ್ಚಿಯಲ್ಲಿ ಸರದಿಯಂತೆ ಹೆಗಲು ಬದಲಾಯಿಸುತ್ತ ಮಹಾರಾಜರನ್ನು ಬೆಟ್ಟದ ಮೇಲಕ್ಕೆ ಕರೆದು ಕೊಂಡು ಹೋದರು. ವಿಶೇಷ ಅತಿಥಿವರೇಣ್ಯರಾದ ಮಹಾ ರಾಜರ ಆಗಮನದ ಸನ್ಮಾನಾರ್ಥವಾಗಿ ಪ್ರವೇಶದ್ವಾರವನ್ನೂ ಮತ್ತು ಇಳಿದುಕೊಳ್ಳುವ ಅತಿಥಿಗೃಹವನ್ನೂ ತೋರಣ ಕಟ್ಟಿ ಸಜ್ಜು ಗೊಳಿಸಿದ್ದರು. ಮಹಾರಾಜರು ಮಂದಿರ ಪ್ರವೇಶಿಸಿ ನೃಸಿಂಹ ಸ್ವಾಮಿಯ ದರ್ಶನ ಮತ್ತು ಪೂಜೆಯನ್ನು ಮಾಡಿಬಂದರು. ನಂತರ ಅತಿಥಿಗೃಹದಲ್ಲಿ ಕುಳಿತು ದೇವರ ಪ್ರಸಾದ ಸ್ವೀಕರಿಸಿ, ಸ್ವಲ್ಪ ಹೊತ್ತು ವಿಶ್ರಮಿಸಿ, ಸಂಜೆ ೫ ಗಂಟೆಯಷ್ಟರ ಹೊತ್ತಿಗೆ ಆಶ್ರಮಕ್ಕೆ ಹಿಂತಿರುಗಿದರು.

*(ಮುಂದುವರಿಯುವುದು)*